ಎಂದು ಗೆಲುವಾದ.

'ನಿಮ್ಮಂಥ ಚೆಲುವೆಯರು ಗಗನಕುಸುಮ ಆದಾಗ!' ಎಂದು ಇವನೂ ಇಮೋಜಿಗಳನ್ನು ಅಂಟಿಸಿದ. ಕಾಲೇಜಿನಲ್ಲಿ ಎದುರಲ್ಲಿ ಕೀಳರಿಮೆಯಿಂದಾಗಿ ಇಂಗಿ ಹೋಗುತ್ತಿದ್ದ ಮಾತುಗಳು ಈಗ ಮೊಬೈಲಿನಲ್ಲಿ ಅಕ್ಷರಗಳಾಗಿ ಹುಂಬ ಧೈರ್ಯ ತೋರುತ್ತಿದ್ದವು.

'ಓಹ್ ನಿಮ್ದೂ ಲವ್ ಫೇಲ್ಯೂರಾ?'
'ಅಂದ್ರೆ? ನಿಮ್ದು ಲವ್ ಫೇಲ್ಯೂರಾ?'
'ನಂದು ಫೇಲ್ಯೂರ್ ಅಲ್ಲಪ್ಪ, ಅದು ಡಿಸಾಸ್ಟರ್' ಬಿದ್ದು ಬಿದ್ದು ನಗುವ ಇಮೋಜಿಗಳನ್ನು ಅಂಟಿಸಿದ್ದಳು.

ಹೊಸಬಣ್ಣನಿಗೆ ನಾಗರತಿಯಲ್ಲಿ ಕಥೆಗಳಿವೆ ಅನಿಸಿತು. ಅಂಕೋಲಿ ಕಾಲೇಜಿನಲ್ಲಿ ಅವಳ ಪ್ರೇಮಕಹಾನಿಗಳನ್ನು ಇವನೇನು ಮರೆತಿರಲಿಲ್ಲ. ಕ್ಯಾಂಪಸ್ಸಿನಲ್ಲಿ ಜಿಮಖಾನಾ ಸೆಕ್ರೆಟರಿ ಫಾಲ್ಗುಣನ ಜೊತೆ ತಿರುಗಿದ್ದು ಹಲವರ ಹೊಟ್ಟೆ ಉರಿಸಿತ್ತು. ಫಾಲ್ಗುಣ ಅವಳಿಗಾಗಿಯೇ ಬಾಸ್ಕೆಟ್ ಬಾಲ್ ಕೋರ್ಟ್ ನಿರ್ಮಿಸಲು ಕಂಡಾಪಟ್ಟೆ ಓಡಾಡಿದ್ದ. ಅವರ ಬಗ್ಗೆ ಗುಸುಗುಸು ಶುರುವಾದಾಗಲೇ ವಾಲಿಬಾಲ್ ಪ್ಲೇಯರ್ ಮಾಸ್ಕೇರಿ ಮಾಬು ಜೊತೆ ನಾಗರತಿ ಹೆಸರು ಕೂಡಿಕೊಂಡಿತ್ತು. ಕ್ಲಾಸ್ ತಪ್ಪಿಸಿ ಪಾವಟೆ ಪಾಯಿಂಟಿನಲ್ಲಿ ತಿರುಗುತ್ತಿದ್ರು, ದೇವಸ್ಥಾನದ ಜಗಲಿಯಲ್ಲಿ ಮೈತಾಗಿಸಿ ಕೂತಿದ್ರು ಎಂಬಿತ್ಯಾದಿ ಗಾಳಿಮಾತು ತೂರಾಡುತ್ತಿದ್ದವು. ಸಿಂಗರ್ ಶ್ರೀನಿವಾಸನೊಂದಿಗೆ ಮುಸ್ಸಂಜೆಯಲ್ಲಿ ಏಕಾಂತದಲ್ಲಿದ್ದದನ್ನು ಕಂಡವರು ರೆಕ್ಕೆಪುಕ್ಕ ಹಚ್ಚಲು ಪ್ರಯತ್ನಿಸಿದ್ದರು. ಆಗೆಲ್ಲ ರೋಚಕಗೊಳಿಸುವ ಇಂಥ ಸುದ್ದಿಗಳಿಗೆ ಸತ್ಯಾಸತ್ಯಗಳ ಹಂಗಿರಲಿಲ್ಲ!

ಹೀಗಿರುವಾಗ ಎಲ್ಲರ ಎದೆಯೊಡೆಯುವ ಸಂಗತಿಯೊಂದು ಸಂಭವಿಸಿತು. ನಾಗರತಿ ಡಿಗ್ರಿ ಕೊನೆ ವರ್ಷದ ಆರಂಭದಲ್ಲೇ ಯಾವುದೇ ಸುಳಿವಿಲ್ಲದೇ ಕಾಲೇಜು ಬಿಟ್ಟು ಹೋದಳು! ತಂಗಾಳಿಯಂತೆ ಬಂದವಳು ಬಿರುಗಾಳಿಯೆಬ್ಬಿಸಿ ಮರೆಯಾಗಿದ್ದಳು. ಕಾರಣವೇನು, ಹೋದದ್ದೆಲ್ಲಿಗೆ ಎಂಬ ಬಗ್ಗೆ ಸಮಾಧಾನಕರ ಉತ್ತರಗಳು ಸಿಗಲಿಲ್ಲ. ಒಬ್ಬೊಬ್ಬರು ಒಂದೊಂದು ರೀತಿಯ ಸುದ್ದಿ ತರುತ್ತಿದ್ದರು. ಅವಳು ಉಳಿದುಕೊಂಡಿದ್ದ ಸಂಬಂಧಿಕರು ಹೆಚ್ಚಿನ ವಿವರ ನೀಡಲಿಲ್ಲ. ವಸ್ತುಸ್ಥಿತಿ ಅಸ್ಪಷ್ಟವಾಗಿರುವಾಗ ವಿವರಗಳು ಕಥಾಸ್ವರೂಪ ತಾಳುವ ರೀತಿಗೆ ಹೊಸಬಣ್ಣ ವಿಸ್ಮಯಗೊಂಡಿದ್ದ. ಕೆಲವರಂತೂ ನಾಗರತಿಯ ವಿರಹದಿಂದ ಅರೆಹುಚ್ಚರಾಗಿದ್ದರು. ಅವಳ ಅನಿರೀಕ್ಷಿತ ನಿರ್ಗಮನದ ನೋವಿನಿಂದ ತಪ್ಪಿಸಿಕೊಳ್ಳಲು ಹೊಸಬಣ್ಣನಿಗೂ ಸಾಧ್ಯವಾಗಿರಲಿಲ್ಲ.

ಆದರೆ ಅವನ ಕೀಳರಿಮೆಯೇ ಅವನನ್ನು ಕಾಪಾಡಿತ್ತು ಎನ್ನಬೇಕು. ಮನೆಯಲ್ಲಿ ಬಡತನವಿತ್ತು. ಗಂಗಾವಳಿ ಬ್ರಿಜ್ಜಿನವರೆಗೆ ನಡೆದು, ಅಲ್ಲಿಂದ ಬಸ್ಸು ಹಿಡಿದು ಕಾಲೇಜಿಗೆ ಹೋಗಬೇಕು. ಹೋಗುವಾಗ ಗಾಂವಕರ ಮನೆಯಿಂದ ಹಾಲು ಒಯ್ದು ಪೇಟೆಯಲ್ಲಿರುವ ಸುದರ್ಶನ ಕೆಫೆಗೆ ಕೊಟ್ಟು ಬರಬೇಕು. (ಕ್ಲಾಸಿಗೂ ಹಿಂಬಾಲಿಸುವ ಹಸಿಹಾಲಿನ ವಾಸನೆಯು ಅವನನ್ನು ಹುಡುಗಿಯರಿಂದ ಒಂದು ಮಾರು ದೂರವೇ ಇಡುತ್ತಿತ್ತು). ಕಾಲೇಜು ಮುಗಿಸಿ ಬಂದ ಮೇಲೂ ಅವನಿಗೆ ಕೆಲಸ ಇರುತ್ತಿತ್ತು. ಆ ನಂತರ ತಡರಾತ್ರಿವರೆಗೂ ಓದಬೇಕು. ಕನಸುಗಳಿಗೂ ಸವುಡು ಇರಲಿಲ್ಲ. ಆದರೆ ಈ ಎಲ್ಲಾ ದೈನಿಕ ಕ್ರಿಯೆಗಳ ನಡುವೆಯೇ ನಾಗರತಿ ಅವನ ಬಡತನ, ಅವಮಾನ, ದಣಿವು ಎಲ್ಲವನ್ನೂ ಸಹ್ಯಗೊಳಿಸುತ್ತಿದ್ದಳು. ಅವಳನ್ನು ಗುಪ್ತವಾಗಿ ಆರಾಧಿಸುತ್ತಿದ್ದ. ತನಗವಳು ಗಗನ ಕುಸುಮ ಎಂಬುದು ಗೊತ್ತಿದ್ದರೂ ಅವಳ ಮೇಲಿನ ಒಲವು ನಿರಂತರವಾಗಿತ್ತು. ಅಂಥ ನಾಗರತಿ ಕ್ಯಾಂಪಸ್ಸಿನಲ್ಲಿ ಕಾಣದೇ ಹೋದ ನೋವು ಹೊಸಬಣ್ಣನ ಎದೆಯನ್ನೂ ಗೀರಿದ್ದು ಸುಳ್ಳಲ್ಲ. ಅವ್ಯಕ್ತ ತಳಮಳವನ್ನು, ದುಗುಡವನ್ನು ಯಾರಲ್ಲೂ ಅರುಹಲಾಗದ ಸಂಕಟವನ್ನು ಅಕ್ಷರಗಳಲ್ಲಿ ತೋಡಿಕೊಂಡಿದ್ದ. ಅಸ್ಪಷ್ಟ ಸಾಲುಗಳಲ್ಲಿ ಗೀಚಿದ ಪ್ರೀತಿ ಪ್ರೇಮ ವಿರಹ ನೋವು ಕಾವ್ಯದ ಅಂಶಗಳನ್ನು ಹೊಮ್ಮಿಸಿ, ಮುಂದೆ ಅವನು ಕವಿಯೂ ಆಗಿದ್ದ!

ಈಗ ಅವನೊಬ್ಬ 'ಸೂಕ್ಷ್ಮ ಸಂವೇದನೆಯ' ಕಥೆಗಾರನೂ ಹೌದು. ಹಾಗೆಂದು ಬಹುಮಾನಿತ ಕತೆಗಳ ಜೊತೆಗೆ ಪತ್ರಿಕೆಗಳು ಪರಿಚಯಿಸಿವೆ. ಎರಡು ಕಥಾಸಂಕಲನಗಳು ಪದೋನ್ನತಿ ಮೇಲೆ ವರ್ಗಾವಣೆಯಾಗಿ ಮುಂಬೈಗೆ ಬಂದ ಮೇಲೇ ಲೋಕಾರ್ಪಣೆಗೊಂಡಿವೆ. ಬಾಲ್ಯದ ದಟ್ಟ ಗ್ರಾಮೀಣ ಹಿನ್ನೆಲೆಗಳೇ ಅವನ ಕಥಾದ್ರವ್ಯಗಳು. ಹೊಸಬಣ್ಣನ ಕಥೆಗಳನ್ನು ಪ್ರಕಟಿಸಿದ ಪತ್ರಿಕೆಯ ಸಂಪಾದಕರು ಮೊನ್ನೆ 'ಪತ್ರಿಕೆ ಹೊಸತನದ ಕಥೆಗಳ ಹುಡುಕಾಟದಲ್ಲಿದೆ. ಆಧುನಿಕ ಮನುಷ್ಯನ ಗ್ರಹಿಕೆಗಳನ್ನು ಸಂಭ್ರಮಗಳನ್ನು ವಿಷಾದಗಳನ್ನು ನಗರ ಕೇಂದ್ರಿತ ಸೆಡವುಗಳನ್ನು